(13)

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 35 ಜೈಅಯೋ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 28.09.2010

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಂದ:

ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: 2010-11ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಮತ್ತು ಮ್ಯಾನುರ ಮ್ಯಾನೇಜ್‌ಮೆಂಟ್ ಕಾರ್ಯಕ್ರಮದಡಿ (ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ) ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 5-5/2009-ಬಿಇ ದಿನಾಂಕ 27.11.2009, 15.04.2010, 14.05.2010 ಮತ್ತು 30.06.2010.

ಉಲ್ಲೇಖಿತ ಪತ್ರ ದಿನಾಂಕ 27.11.20009 ರಲ್ಲಿ ಕೇಂದ್ರ ಸರ್ಕಾರದ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ ನವದೆಹಲಿ ರವರು ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮವನ್ನು 2010-11ನೇ ಸಾಲಿಗೆ ಮುಂದುವರಿಸಲಾಗಿದೆ.

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮವು ಕೇಂದ್ರ ಸರ್ಕಾರದ 20 ಅಂಶಗಳ ಕಾರ್ಯಕ್ರಮದಡಿ 2010-11ನೇ ಸಾಲಿಗೆ ಮುಂದುವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 5ಜೈಅಯೋ 2010 ದಿನಾಂಕ 20.04.2010 ರಲ್ಲಿ ಕಾರ್ಯಕ್ರಮವನ್ನು ಮುಂದುವರಿಸಲಾಗಿದೆ.

**2. ಭೌತಿಕ ಗುರಿ**

ಉಲ್ಲೇಖ(2)ರ ಕೇಂದ್ರ ಸರ್ಕಾರದ ಪತ್ರದಲ್ಲಿ 2010-11ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ 11000 ಜೈವಾನಿಲ ಸ್ಥಾವರಗಳ ಭೌತಿಕ ಗುರಿಯನ್ನು ರಾಜ್ಯಕ್ಕೆ ನಿಗದಿಪಡಿಸಲಾಗಿದ್ದು, ಜಿಲ್ಲೆಗಳ ಭೌತಿಕ ಪ್ರಗತಿಯನುಸಾರ ತ್ರೈಮಾಸಿಕ ಗುರಿಯನ್ನು ನಿಗದಿಪಡಿಸಿದೆ. 11000 ಜೈವಾನಿಲ ಸ್ಥಾವರಗಳ ತಾತ್ಕಾಲಿಕ ಭೌತಿಕ ಗುರಿಯನ್ನು ಆಯಾ ಜಿಲ್ಲಾ ಪಂಚಾಯಿತಿಗಳ ಪ್ರಗತಿ, ಬೇಡಿಕೆ, ಆಯವ್ಯಯದಡಿ ಹಂಚಿಕೆ ಮಾಡಿಕೊಳ್ಳಲಾದ ಅನುದಾನ ವನ್ನು ಪರಿಗಣಿಸಿ, ಜಿಲ್ಲಾ ಪಂಚಾಯಿತಿಗಳಿಗೆ ತ್ರೈಮಾಸಿಕ ಭೌತಿಕ ಗುರಿಯನ್ನು ನಿಗದಿಪಡಿಸಲಾಗುತ್ತದೆ.

(14)

ಜಿಲ್ಲಾ ಪಂಚಾಯತಿಗಳು ನಿಗದಿತ ಗುರಿಗಿಂತ ಹೆಚ್ಚಿನ ಪ್ರಗತಿ ಸಾಧಿಸಬೇಕಾದಲ್ಲಿ ಅಧಿಕ ಗುರಿಗಾಗಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು. ಹೆಚ್ಚಿನ ಗುರಿಗನುಗುಣವಾಗಿ ಸರ್ಕಾರದ ಪೂರ್ವಾನುಮತಿ ಪಡೆಯದೇ ಹೆಚ್ಚಿನ ಪ್ರಗತಿಯನ್ನು ಸಾಧಿಸಿದಲ್ಲಿ ಹೆಚ್ಚಿನ ಗುರಿಗೆ ಸಹಾಯಧನ ಪಾವತಿಸಲು ಸಂಬಂಧಪಟ್ಟ ಅಧಿಕಾರಿಗಳೇ ಜವಾಬ್ದಾರರಾಗಬೇಕಾಗುತ್ತದೆ.

ನಿಗದಿಪಡಿಸಿದ ಗುರಿಗನುಗುಣವಾಗಿ ಪ್ರಗತಿಯನ್ನು ಸಾಧಿಸಲು ಒಂದು ವೇಳೆ ಸಾಧ್ಯವಾಗದೇ ಇರುವ ಸಂದರ್ಭದಲ್ಲಿ ಸೂಕ್ತವಾದ ಕಾರಣಗಳೊಂದಿಗೆ ಗುರಿಯನ್ನು ಕಡ್ಡಾಯವಾಗಿ ಡಿಸೆಂಬರ್ 2010ರ ಮಾಹೆಯ ಅಂತ್ಯದೊಳಗೆ ಸರ್ಕಾರಕ್ಕೆ ಹಿಂದಿರುಗಿಸುವುದು. ಆಯಾ ಜಿಲ್ಲಾ ಪಂಚಾಯಿತಿಗಳಿಗೆ ನಿಗದಿಪಡಿಸಿದ ಗುರಿಯನ್ವಯ ಶೇ.100 ರಷ್ಟು ಪ್ರಗತಿಯನ್ನು ಕಡ್ಡಾಯವಾಗಿ ಸಾಧಿಸುವಲ್ಲಿ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ.

**3. ಕಾರ್ಯಕ್ರಮದ ಅನುಷ್ಠಾನದಲ್ಲಿ ಅನುಸರಿಸಬೇಕಾದ ಆದ್ಯತೆಗಳು:**

1. ಗುಡ್ಡಗಾಡು ಪ್ರದೇಶಗಳು, ಇಂಧನ ಸಮಸ್ಯೆಯಿರುವ ಪ್ರದೇಶಗಳು ಹಾಗೂ ಅರಣ್ಯ ನಾಶದ ಸಮಸ್ಯೆಗಳಿರುವ ಪ್ರದೇಶಗಳಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡುವುದು
2. ಗ್ರಾಮೀಣ ಜನತೆಗೆ ಸೂಕ್ತ ತಿಳುವಳಿಕೆ ನೀಡುವುದರೊಂದಿಗೆ ಶೌಚಾಲಯ ಸಂಪರ್ಕಿತ ಅನಿಲ ಸ್ಥಾವರಗಳ ನಿರ್ಮಾಣಕ್ಕೆ ಆದ್ಯತೆ ನೀಡುವುದು.
3. ಇಲಾಖಾ ಅನುಷ್ಠಾನಾಧಿಕಾರಿಗಳು, ತಮ್ಮ ಪಾತ್ರವನ್ನು ಕಾರ್ಯಕ್ರಮದ ಉತ್ತೇಜನ, ಅರಿವು ಮೂಡಿಸುವುದು, ಗುಣಮಟ್ಟ ನಿಯಂತ್ರಣ, ತರಬೇತಿ ಮತ್ತು ಉಸ್ತುವಾರಿಗೆ ಮುಂತಾದ ಚಟುವಟಿಕೆಗಳಿಗೆ ಹೆಚ್ಚು ಮೀಸಲಿಟ್ಟು, ಸ್ಥಳೀಯ ನಿರ್ಮಾಣವನ್ನು ಟರ್ನ ಕೀ ಏಜೆನ್ಸಿಗಳು ಮತ್ತು ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗಳ ಮುಖಾಂತರ ನಿರ್ಮಿಸಬೇಕಾಗಿರುತ್ತದೆ.
4. ಗ್ರಾಮ ಪಂಚಾಯಿತಿಗಳ ಉಸ್ತುವಾರಿ ವ್ಯಾಪ್ತಿಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಮತ್ತು ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಗಳಲ್ಲಿ ಮಾಡತಕ್ಕದ್ದು.
5. ಸರ್ಕಾರದ ಸುತ್ತೋಲೆ ಸಂಖ್ಯೆ :ಗ್ರಾಅಪ 4 ಜೈಅಯೋ 2001 ದಿನಾಂಕ 27.09.2001 ರನ್ವಯ ದಾಖಾಲಾತಿಗಳನ್ನು ಪರಿಶೀಲಿಸಿ ಜಿಲ್ಲಾ ಪಂಚಾಯಿತಿಗಳೇ ಟರ್ನ ಕೀ ಏಜೆಂಟರ ಪರವಾನಿಗೆಯನ್ನು ನವೀಕರಿಸುವ ಮತ್ತು ನೊಂದಾಯಿಸುವ ಪ್ರಸ್ತಾವನೆಯನ್ನು ನಿರ್ವಹಿಸತಕ್ಕದ್ದು. ಎಲ್ಲಾ ಟರ್ನ ಕೀ ಏಜೆನ್ಸಿಗಳ ಹೆಸರು ಮತ್ತು ವಿಳಾಸಗಳನ್ನು ಗ್ರಾಮ ಪಂಚಾಯಿತಿಗಳಿಗೆ ಒದಗಿಸುವುದು.
6. ಫಲಾನುಭವಿಗಳ ಮನೆಯಲ್ಲಿ ಲಭ್ಯವಿರುವ ಸಗಣಿಯ ಪ್ರಮಾಣದ ಆಧಾರದ ಮೇಲೆ ಸೂಕ್ತ ಗಾತ್ರದ ಸ್ಥಾವರಗಳನ್ನು ನಿರ್ಮಿಸುವುದು( 4–6 ಜಾನುವಾರು ಹೊಂದಿದ ಕುಟುಂಬಗಳಿಗೆ 2 ಘ.ಮೀ ಮತ್ತು 4–6 ಜಾನುವಾರು ಹೊಂದಿದ ಕುಟುಂಬಗಳಿಗೆ 3 ಘ.ಮೀ. ಅನಿಲ ಸ್ಥಾವರ)
7. ಸ್ಥಾವರಗಳನ್ನು ನಿರ್ಮಿಸುವುದಕ್ಕೆ ಗುಂಡಿಯನ್ನು ತೋಡಿರುವ ಸಮಯದಲ್ಲಿ ನಿರ್ಮಾಣಗೊಳ್ಳುತ್ತಿರುವ ಸ್ಥಾವರಗಳ ಹಾಗೂ ಸ್ಥಾವರಗಳು ಪೂರ್ಣಗೊಂಡು ಕಾರ್ಯಾಚರಣೆ ಆರಂಭದ ಸಮಯದಲ್ಲಿ ಕಾರ್ಯಕ್ರಮದ ಯೋಜನಾ ಅಭಿಯಂತರರು ಸಂಬಂಧಿಸಿದ ಕುಟುಂಬದ ಸದಸ್ಯರುಗಳೊಂದಿಗೆ ಛಾಯಚಿತ್ರವನ್ನು ತೆಗೆದು ದಾಖಲೆಗಾಗಿ ಇಡಬೇಕು.

**4. ಸಹಾಯಧನ :**

ಅ. 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗುವ ಅನುದಾನವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದ ಸಹಾಯಧನದ ದರದಂತೆಯೇ ಪಾವತಿಸತಕ್ಕದ್ದು. ಕೇಂದ್ರ ಸರ್ಕಾರದ ಸಹಾಯಧನದ ವಿವರಗಳನ್ನು ಅನುಬಂಧ–1 ಮತ್ತು ರಾಜ್ಯ ಸಹಾಯಧನದ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ. ಕೇಂದ್ರ ಸರ್ಕಾರದ ಸಹಾಯಧನವನ್ನು ರಾಜ್ಯ ಸಹಾಯಧನಕ್ಕೆ ಬಳಸಿಕೊಳ್ಳಬಾರದು. ಒಂದು ವೇಳೆ ಬಳಸಿಕೊಂಡಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. 2010–11ನೇ ಸಾಲಿಗೆ ರಾಜ್ಯ ಅನಿಲ ಯೋಜನೆಯನ್ನು ಸಹ ಮುಂದುವರಿಸಲಾಗಿದೆ.

ಆ. ಅನಿಲ ಸ್ಥಾವರಗಳಿಗೆ ಸಹಾಯಧನವನ್ನು ಪಾವತಿಸುವಾಗ ಫಲಾನುಭವಿಗಳ ಪಟ್ಟಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಯಾವುದೇ ಪ್ರಸಂಗದಲ್ಲೂ ಎರಡು ಬಾರಿ ಸಹಾಯಧನ ಪಾವತಿ ಆಗದ ರೀತಿ ಎಚ್ಚರಿಕೆ ವಹಿಸತಕ್ಕದ್ದು.

ಇ. ಸಹಾಯಧನವನ್ನು ಪೂರ್ಣಗೊಂಡ ಮತ್ತು ಕಾರ್ಯಾರಂಭಗೊಂಡ ಹೊಸ ಜೈವಾನಿಲ ಸ್ಥಾವರಗಳಿಗೆ ಗ್ರಾಮ ಪಂಚಾಯಿತಿ ಮುಖಾಂತರ ಸಂಬಂಧಪಟ್ಟ ಫಲಾನುಭವಿಗಳಿಗೆ ಪಾವತಿಸುವುದು. ಸಹಾಯಧನ ಪಾವತಿಸುವಾಗ ಈ ಹಿಂದೆ ನಿರ್ಮಿಸಲಾದ ಫಲಾನುಭವಿಗಳ ಪಟ್ಟಿಯನ್ನು ಹಾಗೂ ವಿವಿಧ ಇಲಾಖೆಯವರು ( ಕೆವಿಐಸಿ ಮತ್ತು ಇತರೆ) ನಿರ್ಮಿಸಿದ ಫಲಾನುಭವಿಗಳ ಪಟ್ಟಿಗಳನ್ನು ಪರಿಶೀಲಿಸಿ ಒಂದೇ ಸ್ಥಾವರಕ್ಕೆ ಎರಡು ಬಾರಿ ಸಹಾಯಧನ ಪಾವತಿಯಾಗದಂತೆ ಎಚ್ಚರಿಕೆ ವಹಿಸಿ ಸರ್ಕಾರದಿಂದ ಅನುಮೋದಿಸಲ್ಪಟ್ಟ ವಿನ್ಯಾಸದ ಪ್ರಕಾರ ನಿರ್ಮಿಸಿದ ಸ್ಥಾವರಗಳಿಗೆ ಮಾತ್ರ ಸಹಾಯಧನವನ್ನು ನೀಡುವುದು. ವಿವಿಧ ಅನುಮೋದಿತ ಜೈವಿಕ ಅನಿಲ ಸ್ಥಾವರದ ಮಾದರಿಗಳ ವಿವರಗಳನ್ನು **ಅನುಬಂಧ-3** ರಲ್ಲಿ ತೋರಿಸಲಾಗಿದೆ.

ಉ. ಕೇಂದ್ರ ಸರ್ಕಾರವು 2010-11ನೇ ಸಾಲಿನಲ್ಲಿ ಶೌಚಾಲಯ ಸಂಪರ್ಕಿತ ಅನಿಲ ಸ್ಥಾವರಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ ಹಾಗೂ ಟರ್ನ ಕೀ ಫೀಯನ್ನು ಮುಂದುವರಿಸಿದೆ.

**ವಿಶೇಷ ಸೂಚನೆ:**

1. ಎಲ್ಲಾ ಗ್ರಾಮ ಪಂಚಾಯಿತಿಗಳು ಟರ್ನ್ ಕೀ ಫೀಯನ್ನು ಪಾವತಿಸುವಾಗ ಅನಿಲ ಸ್ಥಾವರಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಂಡು ಯಾವುದೇ ಕಾರಣಕ್ಕೂ ಆಯಾ ಸಾಲಿನ ಸಹಾಯಧನದೊಂದಿಗೆ ಟರ್ನ ಕೀ ಫೀಯನ್ನು ಬಾಕಿ ಉಳಿಸಿಕೊಳ್ಳದೇ ಪೂರ್ಣ ಪ್ರಮಾಣದಲ್ಲಿ ಪಾವತಿ ಮಾಡಿ ಸರ್ಕಾರಕ್ಕೆ ಮಾಹಿತಿಯನ್ನು ಸಲ್ಲಿಸತಕ್ಕದ್ದು.
2. ಫ್ಲೆಕ್ಸಿ ಮಾದರಿಯ ಸ್ಥಾವರಗಳಿಗೆ ಟರ್ನ ಕೀ ಫೀ ಪಾವತಿಸಲು ಅವಕಾಶವಿರುವುದಿಲ್ಲ

**5. ತರಬೇತಿ:**

ಕಾರ್ಯಕ್ರಮದ ಉತ್ತಮ ಹಾಗೂ ಯಶಸ್ವಿ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು ಬಳಕೆದಾರರ ತರಬೇತಿ, ನಿರ್ಮಾಣ ಮತ್ತು ನಿರ್ವಹಣೆ ತರಬೇತಿಗಳ ಮೂಲಕ ಗ್ರಾಮೀಣ ಜನತೆಯಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವ ಕುರಿತಂತೆ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಕ್ಕೆ ಹಂಚಿಕೆ ಮಾಡಲಾಗಿದೆ. ಜಿಲ್ಲಾ ಪಂಚಾಯಿತಿಗಳ ಬೇಡಿಕೆಯನುಸಾರ ತರಬೇತಿ ಕಾರ್ಯಕ್ರಮಗಳನ್ನು ಹಂಚಿಕೆ ಮಾಡಲಾಗುತ್ತದೆ. ತರಬೇತಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಅನುಬಂಧ-4 ರಲ್ಲಿ ವಿವರಿಸಲಾಗಿದೆ. ಸರ್ಕಾರಕ್ಕೆ ಕ್ಲೇಮು ಸಲ್ಲಿಸುವಾಗ ತರಬೇತಿಗಾಗಿ ವೆಚ್ಚ ಮಾಡಿದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಕೇಂದ್ರ ಸಹಾಯಧನದಡಿ ವೆಚ್ಚಭರಿಸುವುದು.

**6. ಪ್ರಚಾರ ಕಾರ್ಯಕ್ರಮ :**

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಕರಪತ್ರ, ಫೋಲ್ಡರ್‌ಗಳು ವಿತರಿಸುವುದರ ಜೊತೆ ಸಭೆ ಸಮಾರಂಭಗಳು, ಬಾನುಲಿ ಮುಂತಾದ ಪ್ರಚಾರ ಮಾಧ್ಯಮಗಳನ್ನು ಸಹ ಬಳಸಿಕೊಳ್ಳುವುದು. ಸದರಿ ಪ್ರಚಾರ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಕೇಂದ್ರ ಸಹಾಯಧನದಡಿ ಮಾತ್ರ ಭರಿಸತಕ್ಕದ್ದು.

(12)

8. ಸ್ಥಾವರಗಳ ದುರಸ್ತಿ ಕೆಲಸಕ್ಕೆ ಸಹಾಯಧನ:

ಹಳೆಯದಾದ ಮತ್ತು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿರುವ ಜೈವಾನಿಲ ಸ್ಥಾವರಗಳ ದುರಸ್ತಿಗಾಗಿ 2010-11ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ದುರಸ್ತಿ ಸಹಾಯಧನ ನೀಡುತ್ತದೆ. ಐದು ವರ್ಷಗಳ ಮೇಲ್ಪಟ್ಟು ಹಳೆಯದಾದ ಮತ್ತು ಕಟ್ಟಡ ದುರಸ್ತಿಯ ಕಾರಣದಿಂದ ಸ್ಥಗಿತಗೊಂಡ ಸ್ಥಾವರಗಳಿಗೆ ಹೊಸದಾಗಿ ಸ್ಥಾವರ ನಿರ್ಮಿಸಲು ಲಭ್ಯವಿರುವ ಕೇಂದ್ರ ಸಹಾಯಧನದ ಅರ್ಧದಷ್ಟು (ಶೇ.50) ದುರಸ್ತಿ ಸಹಾಯಧನ ನೀಡಲಾಗುತ್ತಿದೆ. ಸ್ಥಾವರಗಳ ತಪಾಸಣೆ ನಡೆಸಿ ದುರಸ್ತಿ ಗೊಳಿಸಬೇಕಿರುವ ಸ್ಥಾವರಗಳ ಬಗ್ಗೆ ವಿವರಗಳನ್ನು ಅಂದರೆ ಫಲಾನುಭವಿಗಳ ಹೆಸರು, ಗ್ರಾಮ , ಗ್ರಾಮಪಂಚಾಯಿತಿ, ತಾಲ್ಲೂಕು, ಜಿಲ್ಲೆ ಮತ್ತು ದುರಸ್ತಿಗೆ ತಗಲಬಹುದಾದ ವೆಚ್ಚವನ್ನೊಳಗೊಂಡಂತೆ, ದುರಸ್ತಿ ವೆಚ್ಚದಲ್ಲಿ ಫಲಾನುಭವಿ ಪಾಲನ್ನು ಭರಿಸುವ ಸಾಮರ್ಥ್ಯದ ಬಗ್ಗೆ ವಿವರಗಳನ್ನು ಚಾಲ್ತಿಯಲ್ಲಿರುವ ನಮೂನೆಯಲ್ಲಿ ಭರ್ತಿ ಮಾಡಿ ಜಿಲ್ಲೆಯ ಎಲ್ಲಾ ತಾಲಕ್ಲೂಕುಗಳ ಪಟ್ಟಿಯನ್ನು ಒಂದೇ ಕಂತಿನಲ್ಲಿ ಜಿಲ್ಲಾ ಪಂಚಾಯಿತಿಯಿಂದ ಸರ್ಕಾರಕ್ಕೆ ಜನವರಿ ಅಂತ್ಯದೊಳಗೆ ಸಲ್ಲಿಸಿದಲ್ಲಿ ಇವುಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿ ಮುಂಗಡ ಅನುದಾನ ಪಡೆದು ಸಂಬಂಧಿಸಿದ ಜಿಲ್ಲೆಗಳಿಗೆ ದುರಸ್ತಿ ಸಹಾಯಧನ ಬಿಡುಗಡೆ ಮಾಡಲಾಗುವುದು, ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೇ ದುರಸ್ತಿ ಕೆಲಸವನ್ನು ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ.

8 ಜೈವಾನಿಲ ಉಪಕರಣಗಳನ್ನು ಬಳಸುವ ಬಗ್ಗೆ:

ಕೇಂದ್ರ ಸರ್ಕಾರದ ಸೂಚನೆಯಂತೆ ಸ್ಟವ್‌ಗಳಲ್ಲಿ ಐಎಸ್‌ಐ ಮಾದರಿಯ ಬರ್ನರ್‌ಗಳನ್ನು ಉಪಯೋಗಿಸತಕ್ಕದ್ದಯ. ಇಂತಹ ಬರ್ನರ್‌ಗಳು ಕನಿಷ್ಠ ಪಕ್ಷ ಶೇ.55 ರಷ್ಟು ಶಾಖ ಉತ್ಪನ್ನತೆ ಹೊಂದಿರುವ ಬಗ್ಗೆ ಹಾಗೂ ಇತರೆ ಉಪಕರಣಗಳು ಸಹ ಐಎಸ್‌ಐ ಗುಣಮಟ್ಟವನ್ನು ಹೊಮದಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕಾಗುತ್ತದೆ.

9. ಮಾದರಿ:ದಾಖಲಾತಿ ವಿವರಗಳು:

ಕೇಂದ್ರ ಸರ್ಕಾರದ ಸೂಚನೆಯಂತೆ ನಿರ್ಮಿಸಬಹುದಾದ ವಿವಿದ ಮಾದರಿಗಳ ಬಗ್ಗೆ ಅನಿಲ ಸ್ಥಾವರಗಳನ್ನು ನಿರ್ಮಿಸುವಾಗ ಮಾದರಿ ಹೆಸರು, ದಿನಾಂಕ ಫಲಾನುಭವಿಗಳ ಹೆಸರು ಮತ್ತು ಟರ್ನ ಕೀ ಏಜೆಂಟ್/ ಏಜನ್ಸಿಯವರ ಹೆಸರು ಮತ್ತು ವಿಳಾಸವನ್ನು ಸ್ಥಾವರದ ಮೇಲೆ ನಮೂದಿಸತಕ್ಕದ್ದು. ಕಚೇರಿ ದಾಖಾಲಾತಿ ಪುಸ್ತಕಗಳಲ್ಲಿ ಕಡ್ಡಾಯವಾಗಿ ಫಲಾನುಭವಿಗಳ ಹೆಸರು, ವಿಳಾಸ, ಸಹಾಯಧನ ಪಾವತಿಸಿದ ದಿನಾಂಕ ಟರ್ನ ಕೀ ಏಜೆನ್ಸಿಯ ವಿವರಗಳು, ಸ್ಥಾವರ ಪೂರ್ಣಗೊಂಡ ದಿನಾಂಕ ಮತ್ತು ಮಾದರಿ ಹೆಸರುಗಳನ್ನು ವಿವರವಾಗಿ ದಾಖಲಿಸತಕ್ಕದ್ದು.

10. ಸರ್ಕಾರಕ್ಕೆ ಪ್ರಗತಿ ವರದಿ ಸಲ್ಲಿಸುವ ಬಗ್ಗೆ

ಜೈವಾನಿಲ ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ನಿಗದಿತ ನಮೂನೆಯಲ್ಲಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಫಲಾನುಭವಿ ಪಟ್ಟಿಯೊಂದಿಗೆ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಕ್ರೋಢೀಕರಿಸಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳು Online ವ್ಯವಸ್ಥೆ ಮೂಲಕ rdpr website ನಲ್ಲಿ ಅಳವಡಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ತರಬೇತಿ ಮತ್ತು ಪ್ರಚಾರ ಕಾರ್ಯಕ್ರಮಗಳ ವಿವರವನ್ನು ಸರ್ಕಾರಕ್ಕೆ ಕಳುಹಿಸುವುದು.

11. ಹಣ ಬಳಕೆ ಪ್ರಮಾಣ ಪತ್ರ ಮತ್ತು ಕ್ಲೈಮುಗಳನ್ನು ಸಲ್ಲಿಸುವ ಬಗ್ಗೆ

ಸರ್ಕಾರದಿಂದ ಹೊರಡಿಸಲಾದ ಆದೇಶ, ಸುತ್ತೋಲೆಗಳನ್ವಯ ಹಣಬಳಕೆ ಪ್ರಮಾಣ ಪತ್ರವನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರ ಸಹಿ ಹಾಗೂ ಮುದ್ರೆಯೊಂದಿಗೆ ಜಿಲ್ಲಾ ಪಂಚಾಯಿತಿಗಳಿಗೆ ಸಲ್ಲಿಸುವುದು. ಜಿಲ್ಲಾ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಂದ ಸ್ವೀಕರಿಸಿದ ಕ್ರೋಢೀಕೃತ ಹಣಬಳಕೆ ಪ್ರಮ್ಮಾಣ ಪತ್ರ ಮತ್ತು ಕ್ಲೈಮುಗಳನ್ನು ನಿಗದಿತ ನಮೂನೆಯಲ್ಲಿ 30.04.2011ರೊಳಗೆ ಸರ್ಕಾರಕ್ಕೆ ಸಲ್ಲಿಸುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರದಡಿ ಬಿಡುಗಡೆ ಮಾಡಿದ ಅನುದಾನಕ್ಕೆ ಸಿ.ಎ. ರವರಿಂದ ಆಡಿಟ್ ಮಾಡಿಸಿ, ಕ್ರೋಢೀಕೃತ ಹಣ ಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾ ಪಂಚಾಯಿತಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕಾರ್ಯಕ್ರಮದ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ಆಯಾ ವರ್ಷದಲ್ಲಿ ಅನುಷ್ಠಾನಗೊಳಿಸಲಾದದ ಅನಿಲ ಸ್ಥಾವರಗಳಿಗೆ ಟರ್ನ ಕೀ ಫೀ ಯನ್ನು ಕಡ್ಡಾಯವಾಗಿ ಪಾವತಿಸುವುದು (ಸರ್ಕಾರದ ಸುತ್ತೋಲೆ ಗ್ರಾಅಪ 4 ಜೈಅಯೋ 2001 ದಿನಾಂಕ 29.09.2001 ರಲ್ಲಿ ಸೂಚಿಸಲಾದಂತೆ)

ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ನಿಗದಿತ ನಮೂನೆಯಲ್ಲಿ ಫಲಾನುಭವಿಗಳ ಕ್ರೋಢೀಕೃತ ಪಟ್ಟಿಯನ್ನು ಪರಿಶೀಲಿಸಿ ಸಲ್ಲಿಸುವುದು.

12. ಜೈವಾನಿಲ ಸ್ಥಾವರಗಳನ್ನು ಪ್ರಚುರ ಪಡಿಸುವಾಗ ಪ್ರತಿ ತಾಲ್ಲೂಕಿನಲ್ಲಿ ದುರ್ಗಮ ಮತ್ತು ಸಂಪರ್ಕ ಸಾಧ್ಯವಿಲ್ಲದ ಗ್ರಾಮಗಳಿಗೆ ಆದ್ಯತೆ ನೀಡಿ , ಕೆಲವು ಗ್ರಾಮಗಳನ್ನು ಆಯ್ದುಕೊಂಡು, ಆ ಗ್ರಾಮದಲ್ಲಿಯೆ ಸ್ಥಾವರಗಳ ನಿರ್ಮಾಣಕ್ಕೆ ಒತ್ತುಕೊಡತಕ್ಕದ್ದು ಹಾಗೂ ಹೊಗೆರಹಿತ ಗ್ರಾಮವನ್ನಾಗಿ ಮಾಡತಕ್ಕದ್ದು.

13. ಸಹಾಯಧನ ವಿತರಣಾವಹಿಯಲ್ಲಿ, ಫಲಾನುಭವಿಗಳ ಸಂಪೂರ್ಣ ವಿಳಾಸವನ್ನು ನಮೂದಿಸಿ ಅವರ ಛಾಯಚಿತ್ರವನ್ನು ಪೂರ್ಣಗೊಂಡ ಸ್ಥಾವರದೊಂದಿಗೆ ಪಡೆದು ಅಂಟಿಸತಕ್ಕದ್ದು.

14. ಈ ಯೋಜನೆಯಡಿ ತಗಲುವ ವೆಚ್ಚವನ್ನು ಕೆಳಗೆ ಸೂಚಿಸಿದ ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.

ಅ. 2010-11ನೇ ಸಾಲಿನ ಕೇಂದ್ರ ಸರ್ಕಾರ ನಿಗದಿಪಡಿಸಿದ ದರದಂತೆ ಸಹಾಯಧನ, ಟರ್ನ ಕೀ ಫೀ, ತೀವ್ರಗತಿ ಜಿಲ್ಲೆಗಳಲ್ಲಿರುವ ಸಿಬ್ಬಂದಿಗಳ ವೆಚ್ಚವನ್ನು ಮತ್ತು ತರಬೇತಿಗಳಿಗಾಗಿ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ ( 2810-60-198-6-01) ಯಡಿ ಭರಿಸತಕ್ಕದ್ದು.

15. ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಆದೇಶ, ಸುತ್ತೋಲೆಗಳನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

ತಮ್ಮ ವಿಶ್ವಾಸಿ,

( ಪಿ.ಎ.ಮೇಘಣ್ಣವರ)
ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು:
1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ(ಅಭಿವೃದ್ಧಿ) ಮತ್ತು ಮುಖ್ಯ ಲೆಕ್ಕಾಧಿಕಾರಿಗಳು
3. ನಿರ್ದೇಶಕರು, ಕೃಷಿ ನಿರ್ದೇಶನಾಲಯ, ಶೇಷಾದ್ರಿರಸ್ತೆ, ಬೆಂಗಳೂರು
4. ಎಲ್ಲಾ ಜಿಲ್ಲೆಯ ಜಂಟಿ ಕೃಷಿ ಅಧಿಕಾರಿಗಳಿಗೆ

(10)

5. ಉಪಜನರಲ್ ಮ್ಯಾನೇಜರ್, ನಬಾರ್ಡ್, ಜೀವನ ಪ್ರಕಾಶ್ ಅನೆಕ್ಸ 113:1, ಜೆ.ಸಿ.ರಸ್ತೆ, ಬೆಂಗಳೂರು 560–024.
6. ಸಮನ್ವಯ ಅಧಿಕಾರಿ, ಪ್ರಾದೇಶಿಕ ಜೈವಾನಿಲ ಅಭಿವೃದ್ಧಿ ತರಬೇತಿ ಕೇಂದ್ರ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು– 560 024
7. ವಿಶೇಷಾಧಿಕಾರಿಗಳು,( ಜಿಲ್ಲಾ ಪಂಚಾಯತ್) ಆರ್ಥಿಕ ಇಲಾಖೆ , ವಿಧಾನ ಸೌಧ, ಬೆಂಗಳೂರು
8. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
9. ನಿರ್ದೇಶಕರು, ಪಿಎಂಐ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
10. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ
11. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
12. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು

(೨)

ಅನುಬಂಧ–1

## ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ

### ಕೇಂದ್ರ ಸಹಾಯಧನ – 2010–11

| ಅನಿಲ ಸ್ಥಾವರಗಳ ಗಾತ್ರ ( ಘ.ಮೀ) | ಕೇಂದ್ರ ಸರ್ಕಾರ ಸಹಾಯಧನ (ರೂ.ಗಳಲ್ಲಿ) | | |
|---|---|---|---|
| | ಕೇಂದ್ರ ಸಹಾಯಧನ | ಟರ್ನ್ ಕೀ ಫೀ | ಶೌಚಾಲಯ ಸಂಪರ್ಕಿತ ಅನಿಲ ಸ್ಥಾವರಗಳಿಗೆ ಪ್ರೋತ್ಸಾಹಧನ |
| 1 | 4000 | 1500 | 1000 |
| 2 ಮತ್ತು ಮೇಲ್ಪಟ್ಟು | 8000 | 1500 | 1000 |

ಅನುಬಂಧ–2

## ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ

### ರಾಜ್ಯ ಸಹಾಯಧನ – 2010–11

| ಅನಿಲ ಸ್ಥಾವರಗಳ ಗಾತ್ರ (ಘ.ಮೀ) | ರಾಜ್ಯ ಸಹಾಯಧನ (ರೂ.ಗಳಲ್ಲಿ) |
|---|---|
| 1 | 1500 |
| 2 ಮತ್ತು ಮೇಲ್ಪಟ್ಟು | 3500 |

( ಪಿ.ಎ.ಮೇಘಣ್ಣವರ)
ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

(8)

## ಅನುಬಂಧ-3

**2010-11ನೇ ಸಾಲಿಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ವಿವಿಧ ಅನುಮೋದಿತ ಮಾದರಿಗಳು**

| | |
|---|---|
| 1 | ಕೆ.ವಿ.ಐ.ಸಿ ಮಾದರಿ (ಡ್ರಂ ಮಾದರಿ) 1 ರಿಂದ 10 ಘ.ಮೀ ವರೆಗೆ ಮಾತ್ರ |
| 2 | ಕೆ.ವಿ.ಐ.ಸಿ ಮಾದರಿ (ಫೆರೋಸಿಮೆಂಟ್ ಡೈಜೆಸ್ಟರ್ ಮಾದರಿ) 1 ರಿಂದ 10 ಘ.ಮೀ ವರೆಗೆ ಮಾತ್ರ |
| 3 | ಕೆ.ವಿ.ಐ.ಸಿ ಮಾದರಿ (ಫೈಬರ್ ಡ್ರಂ ಮಾದರಿ) 1 ರಿಂದ 10 ಘ.ಮೀ ವರೆಗೆ ಮಾತ್ರ |
| 4 | ಧೀನಬಂಧು ಮಾದರಿ 1 ರಿಂದ 6 ಘ.ಮೀ ವರೆಗೆ ಮಾತ್ರ |
| 5 | ಸ್ವಸ್ತಿಕ್ ರಬ್ಬರ್ ಪ್ರಾಡಕ್ಟ್ ಲಿ.ಪುಣೆಯವರಿಂದ ನಿರ್ಮಿಸಲಾದ ಪ್ಲೆಕ್ಸಿ ಮಾದರಿ 1 ರಿಂದ 6 ಘ.ಮೀ ವರೆಗೆ ಮಾತ್ರ |
| 6 | ಶಕ್ತಿ ಸುರಭಿ ಎಫ್‌ಆರ್‌ಪಿ ಆಧಾರಿತ ಫ್ಲೋಟಿಂಗ್ ಡೂಮ್ ( ಕೆವಿಐಸಿ ಮಾದರಿ) 1 ರಿಂದ 2 ಘ.ಮೀ. ವರೆಗೆ ಮಾತ್ರ |
| 7 | ಸಿನ್ಟೆಕ್ಸ್ ಇಂಡಸ್ಟ್ರೀಸ್ ಲಿ ಕಲೋಲ್(ಗುಜರಾತ್) ರವರಿಂದ ನಿರ್ಮಿಸಲಾದ ಪ್ಲಾಸ್ಟಿಕ್ ಆಧಾರಿತ ಫ್ಲೋಟಿಂಗ್ ಡೂಮ್ ( ಕೆವಿಐಸಿ ಮಾದರಿ) 1 ರಿಂದ 2 ಘ.ಮೀ. ವರೆಗೆ ಮಾತ್ರ |

( ಪಿ.ಎ.ಮೇಘಣ್ಣವರ)
ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

(7)

# ಅನುಬಂಧ –4

## ತರಬೇತಿ

| ಕ್ರ.ಸಂ | ತರಬೇತಿ ವಿವರ | ಅವಧಿ | ನಿಗದಿಪಡಿಸಲಾದ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಉಪಯೋಗದಾರರ ತರಬೇತಿ | 01 ದಿನ | 2000 (ಸಾದಿಲ್ವಾರು ವೆಚ್ಚ ರೂ.500/- ಒಳಗೊಂಡಂತೆ) |
| 2 | ಸ್ಟ್ಯಾಫ್ ತರಬೇತಿ | 04 ದಿನ | 8000(ಸಾದಿಲ್ವಾರು ವೆಚ್ಚ ರೂ.1500/- ಒಳಗೊಂಡಂತೆ) |
| 3 | ನಿರ್ಮಾಣ ಮತ್ತು ನಿರ್ವಹಣೆ | 10 ದಿನ | 35000(ಸಾದಿಲ್ವಾರು ವೆಚ್ಚ ರೂ.4000/-ಒಳಗೊಂಡಂತೆ) |

( ಪಿ.ಎ.ಮೇಘಣ್ಣವರ)
ನಿರ್ದೇಶಕರು(ಗ್ರಾಮೂಸೌ) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.